ಕೋರಿಕೆಯನ್ನು ಸಲ್ಲಿಸಿದ್ದ.

‘ಓ ಖಂಡಿತವಾಗಿ. ಅವರು ಬಂದೊಡನೆಯೇ ಚಿಕಿತ್ಸೆ ಶುರು ಮಾಡಿ ಬಿಡೋಣ’ ಎಂದ ಚಿಕಿತ್ಸಕ ಚಾಲಕನ ದೇಹಕ್ಕೆ ಅಳವಡಿಸಬೇಕಾದ ಕೃತಕ ಉಪಕರಣಗಳನ್ನು ಸಜ್ಜುಗೊಳಿಸಲು ಆಪರೇಷನ್ ಥಿಯೇಟರ್‌ಗೆ ಸಾಗಿದ್ದರು.

ಅವಿರತ್‌ನೊಂದಿಗೆ ಹನ್ನಾ ಹೊರಬಂದಾಗ ಹೊರಗಿನ ಕೇಂದ್ರದ ಔಟ್‌ಪೋಸ್ಟ್‌ನಲ್ಲಿನ ಸಹಾಯಕ ವಿರೂ ಗಾಯಾಳುವಿನ ಕುಟುಂಬಸ್ಥರಿಗೆ ಚಿಕಿತ್ಸಾ ಘಟಕದ ದಾರಿ ತೋರಿಸುತ್ತಿರುವುದು ಕಾಣಿಸಿತ್ತು. ಆಪರೇಷನ್ ಬಳಿಕ ಗಾಯಾಳುವನ್ನು ‘ಹೋಮ್‌ಕೇರ್’ ಯೋಜನೆಯಡಿ ಮನೆಗೆ ಸಾಗಿಸಲು ವ್ಯವಸ್ಥೆ ಮಾಡಿ ರಾತ್ರಿಯ ಕತ್ತಲಿನ ಚಾದರದಡಿ ಕೊಂಚ ಉಪಾಹಾರ ಸೇವಿಸಲು ಸಮೀಪದ ‘ರಿಫ್ರೆಶ್‌ಮೆಂಟ್ ಸೆಂಟರ್’ಗೆ ಹೋಗಲು ಅವಿರತ್ ಸಜ್ಜಾಗಿದ್ದ. ತನ್ನೊಂದಿಗೆ ಅಷ್ಟೊತ್ತಿನಿಂದ ಜೊತೆಗಿದ್ದ ಹನ್ನಾಳನ್ನೂ ತನ್ನೊಂದಿಗೆ ಉಪಹಾರ ಸೇವಿಸುವಂತೆ ಆಹ್ವಾನಿಸುವುದು ಸೌಜನ್ಯವೆನಿಸಿತ್ತು.

‘ಮ್ಯಾಮ್ ನನ್ನೊಂದಿಗೆ ರಿಫ್ರೆಶ್‌ಮೆಂಟ್ ಸೇವಿಸಲು ಅಡ್ಡಿಯಿಲ್ಲ ತಾನೇ’ ಎಂದ ಅವನ ಸವಿನಯ ಕೋರಿಕೆಯನ್ನು ನಿರಾಕರಿಸಲಾಗದೆ, ಈ ಆಗುಹೋಗುಗಳ ಮಧ್ಯೆ ಮರೆತಂತಿದ್ದ ಹಸಿವು ಈಗ ತನ್ನ ಅಸ್ತಿತ್ವ ತೋರಿಸಿತು. ‘ಆಗಲಿ’ ಎಂಬಂತೆ ತಲೆಯಾಡಿಸಿದಳು.

ಅವಳಿಗಂದು ಸಿಟಿ ಸೆಂಟ್ರಲ್‌ನಲ್ಲಿ ಕರ್ತವ್ಯಕ್ಕೆ ನಿಯೋಜಿಸಲಾಗಿದ್ದು ರಾತ್ರಿ ಗಸ್ತು ಸಹ ಅಲ್ಲಿಯೇ ಕೈಗೊಳ್ಳಬೇಕಿದ್ದರಿಂದ, ಆ ಪ್ರದೇಶದಲ್ಲೇ ರಿಫ್ರೆಶ್‌ಮೆಂಟ್ ಸೇವಿಸಿದರೆ ಅನುಕೂಲವೆಂದೆನಿಸಿ ತನ್ನ ಮನದಿಂಗಿತ ಅರುಹಿದ್ದಳು.

‘ನವಗ್ರಹಕ್ಕೆ ಹೋದರೆ ಹೇಗೆ?’ ಎಂದು ಹನ್ನಾ ಕೇಳಿದಾಗ ಅದಕ್ಕೆ ಅವಿರತ್ ನನ್ನದೇನೂ ಅಭ್ಯಂತರವಿಲ್ಲವೆಂದು ತನ್ನ ವಾಹನವನ್ನು ಅತ್ತ ಓಡಿಸಿದ್ದ. ಅವನನ್ನು ಹಿಂಬಾಲಿಸಿ ಹನ್ನಾಳೂ ನಿರ್ದಿಷ್ಟ ತಾಣಕ್ಕೆ ಸಾಗಿದ್ದಳು.

ಸಿಟಿಯಲ್ಲಿನ ವ್ಯಾಪಾರಸ್ಥರಿಗೆ ಅನುಕೂಲವಾಗಲೆಂಬಂತೆ ಸರ್ಕಾರವೇ ಹಳೆಯ ಕಟ್ಟಡಗಳನ್ನು ನೆಲಸಮ ಮಾಡಿ ಬೃಹತ್ ಕಾಂಪ್ಲೆಕ್ಸ್‌ಗಳನ್ನು ವಿಷಯವಾರು ವಿಂಗಡಣೆ ಮಾಡಿ ಇಡೀ ನಗರದ ವ್ಯಾಪಾರಿಗಳ ಕೇಂದ್ರ ನರಮಂಡಲವನ್ನು ನಿರ್ಮಿಸಿತ್ತು. ಒಂದು ರಸ್ತೆ ಆಭರಣಗಳ ಮಾರಾಟಕ್ಕೆ ಮೀಸಲಿದ್ದರೆ ಮತ್ತೊಂದು ನವೀನ ಫ್ಯಾಷನ್ ವಸ್ತುಗಳಿಗೆ, ಮಗದೊಂದು ಎಲೆಕ್ಟ್ರಾನಿಕ್ ಉಪಕರಣಗಳಿಗೂ ನಿಗದಿಗೊಂಡಿತ್ತು. ಸಸ್ಯಸಂಕುಲ ಕ್ಷೀಣಿಸಿದ್ದರಿಂದ ಕೃತಕವಾಗಿ ಲ್ಯಾಬೊರೇಟರಿಯಲ್ಲಿ ತಯಾರಿಸಲಾದ ಸಸ್ಯಮಾಂಸದ ವಿವಿಧ ತಿನಿಸುಗಳೂ, ಮನೆಯ ಪೀಠೋಪಕರಣಗಳಲ್ಲದೆ ಸಹಾಯಕ ರೊಬೋಟ್‌ಗಳ ಮಾರಾಟ ಮಳಿಗೆಗಳಿಗೂ ರಸ್ತೆಗಳು ಮೀಸಲಿದ್ದವು. ವಸ್ತುಗಳನ್ನು ಆನ್‌ಲೈನ್‌ನಲ್ಲಿ ಖರೀದಿಸಬಹುದಾಗಿದ್ದರೆ ದಿನನಿತ್ಯದ ಅಗತ್ಯಗಳಿಗೆ ಬೇಕಾದಂತಹ ವಸ್ತುಗಳ ಖರೀದಿಗಾಗಿ ಜನಸಮೂಹವೇ ಅಲ್ಲಿಗೆ ಆಗಮಿಸುತ್ತಿದ್ದರಿಂದ ರಸ್ತೆಗಳು ಇಕ್ಕಟ್ಟಾಗಿ ವಾಹನಗಳ ಪಾರ್ಕಿಂಗ್‌ಗೆ ಸ್ಥಳದ ಅಭಾವ ತಲೆದೋರಿತ್ತು. ಇದನ್ನು ಅರಿತ ಸಂಚಾರ ಆಯುಕ್ತರಿಂದ ಆದೇಶವೊಂದು ಹೊರಟು ಅಲ್ಲಿ ಸಾರ್ವಜನಿಕರ ವೈಯಕ್ತಿಕ ವಾಹನ ಸಂಚಾರಕ್ಕೆ ನಿಷೇಧ ಹೇರಲಾಗಿತ್ತು. ಖಾಸಗಿಯಾಗಿ ಸಣ್ಣ ಬ್ಯಾಟರಿ ಚಾಲಿತ ವಾಹನಗಳು ಜನರನ್ನು ಒಳಗೆ ಸುತ್ತಾಡಿಸಿ ಕರೆ ತರುವ ವ್ಯವಸ್ಥೆ ಇದ್ದು ಈ ವ್ಯವಸ್ಥೆಯಡಿ ಸಂಚಾರ ವಿಭಾಗದಲ್ಲಿ ಕಾರ್ಯನಿರ್ವಹಿಸುವ ಟ್ರಾಫಿಕ್ ವಾರ್ಡನ್ ಹಾಗೂ ಇತರ ಅಧಿಕಾರಿಗಳಿಗೆ ವಿನಾಯಿತಿ ನೀಡಲಾಗಿತ್ತು.

‘ನವಗ್ರಹ ಸ್ಕೈ ಡೈನಿಂಗ್ ಕೇಂದ್ರ’ವನ್ನು ತಲುಪಿದಾಗ ಅವರ ಕಣ್ಣೋಟ ಬಾನತ್ತ ಹಾಯ್ದು ಒಂಬತ್ತು ಬೃಹತ್ ಆಕಾರದ ಬಣ್ಣದ ಮೊಟ್ಟೆಯಾಕಾರವು ಉದ್ದದ ಸ್ತಂಭದ ಮೇಲೆ ನಿಂತಂತೆ ಕಾಣಿಸಿ ಅವರಿಗೆ ಆಹ್ವಾನ ನೀಡುವಂತಿತ್ತು. ಸುತ್ತಲೂ ವ್ಯಾಪಾರ ಮಳಿಗೆಗಳಿಂದ ಹೊರಹೊಮ್ಮುತ್ತಿದ್ದ ವಾಣಿಜ್ಯೋದ್ಯಮದ ನಡುವೆ ಗುಂಡಗಿನ ವಿವಿಧ ಬೆಳಕಿನ ಕೇಂದ್ರಗಳು ಒಂದೊಂದು ಬಣ್ಣವನ್ನು ಹೊರಹೊಮ್ಮಿಸಿ ಎದ್ದು ಕಾಣುತ್ತಿತ್ತು. ಅವಿರತ್ ಹಾಗೂ ಹನ್ನಾ ಲಿಫ್ಟ್‌ನೊಳಗೆ ಹೋಗುವ ಮುನ್ನ ಪ್ರವೇಶದ್ವಾರದಲ್ಲಿ ತಮ್ಮ ಗುರುತನ್ನು ಛಾಪಿಸಿ ಒಳಹೋದೊಡನೆಯೇ ಅವರ ‘ಗಮ್ಯಸ್ಥಾನ’ಗಳು ಸೂಚಕದಲ್ಲಿ ಮೂಡಿತ್ತು. ತಮ್ಮ ಆಯ್ಕೆಯನ್ನು ನಮೂದಿಸುವ ಮುನ್ನ ಹನ್ನಾ ‘ಶುಕ್ರವಾಸಿನಿ’ಗೆ ಹೋಗೋಣವೆಂದು ಉಸುರಿ ಆಯ್ಕೆಯನ್ನು ಒತ್ತಿದ್ದಳು.

ಸುತ್ತಲೂ ಗಾಜಿನಿಂದ ಆವೃತವಾದ ಲಿಫ್ಟ್ ಮೇಲಕ್ಕೆ ಏರುವಾಗಲೇ ಸುತ್ತಲಿನ ನಗರಿಯ ವಿನ್ಯಾಸದ ಕಟ್ಟಡಗಳು ಬಣ್ಣದ ಬೆಳಕಿನಡಿ ಬಹು ಸೊಗಸಾಗಿ ಕಾಣುತ್ತಿದ್ದವು.




ಅವರು ‘ಗಮ್ಯಸ್ಥಾನ’ವನ್ನು ತಲುಪುತ್ತಲೇ ಯಾವುದೋ ಅನ್ಯಗ್ರಹದಲ್ಲಿರುವಂತಹ ಕೃತಕ ಪರಿಸರದೊಳಗೆ ಕಾಲಿರಿಸಿದಂತಾಗಿತ್ತು. ವರ್ಚ್ಯುವಲ್ ವಾಕ್ ಥ್ರೂ ಮೂಲಕ ಅಲ್ಲಲ್ಲಿ ಮೇಜನ್ನಾಕ್ರಮಿಸಿದ ತಿಂಡಿ, ತಿನಿಸು ಸೇವಿಸುತ್ತಿದ್ದ ಜನರ ಮಧ್ಯೆ ದಾರಿ ಕಂಡುಕೊಂಡು ಆ ಕೇಂದ್ರದ ತುದಿಗೆ ಆಗಮಿಸಿ ಖಾಲಿ ಕುರ್ಚಿಗಳಲ್ಲಿ ಆಸೀನರಾದರು. ಅವರು ಕುಳಿತ ತಾಣದಿಂದ ಹೊರಗಿನ ಪರಿಸರದ ಪಕ್ಷಿನೋಟ ದೊರಕಿ ಮಾದಕ ಹಿನ್ನೆಲೆ ಸಂಗೀತದೊಂದಿಗೆ ಗಮ್ಯದಲ್ಲಿ ತೇಲಾಡಿದಂತಾಗಿತ್ತು. ಅದರೊಂದಿಗೆ ಇಡೀ ಪರಿಸರವು ಮೋಷನ್ ಟ್ರಾಕರ್ಸ್ ಸಂವೇದಿಯ ಅಧೀನಕ್ಕೆ ಒಳಪಟ್ಟಿದ್ದು, ಅವರ ಪ್ರತಿ ಚಟುವಟಿಕೆಗಳು ದಾಖಲಾಗಿ ತಾವು ಬೇರೊಂದು ಗ್ರಹದಲ್ಲಿದ್ದೇವೇನೋ ಎಂಬಂತಹ ಚಲನೆಯನ್ನು ಅನುಭವವೇದ್ಯವಾಗಿಸಿತ್ತು. ಆ ಕೃತಕ ಗ್ರಹದ ಪರಿಸರ ನಿರ್ಮಾಣದಲ್ಲಿ ಅವರಿಗೆ ಆ ಗ್ರಹದ ಗುರುತ್ವಾಕರ್ಷಣೆಯೊಂದು ಮಾತ್ರ ನೈಜವಾಗಿರದಿದ್ದುದು ಸಹಜ ನಡಿಗೆಗೆ ಅನುವು ಮಾಡಿಕೊಟ್ಟಿತ್ತು. ಇಲ್ಲದಿದ್ದರೆ ಆಕ್ಸಿಲೋಮೀಟರ್‌ಗಳ ಕಾರ್ಯ ನಿರ್ವಹಣೆಗೆ ಆರಾಮವಾಗಿ ನಡೆಯುವುದಿರಲಿ, ಕುರ್ಚಿಯಲ್ಲಿ ಕುಳಿತುಕೊಳ್ಳುವುದೂ ದುಸ್ತರವಾಗುತ್ತಿತ್ತೇನೋ.

ಅವರಿದ್ದ ಶುಕ್ರವಾಸಿನಿ ನಿಧಾನವಾಗಿ ಮುಖ್ಯ ಸ್ಥಂಬದಿಂದ ಕಳಚಿಕೊಂಡು ನೀರ್ಗುಳ್ಳೆಯೊಂದರಲ್ಲಿ ಕುಳಿತು ಗಾಳಿಯಲ್ಲಿ ತೇಲಾಡಿದ ಅನುಭವ ನೀಡುತ್ತಿತ್ತು. ಹಾಗೆಯೇ ಚಲನೆಯೂ ಕಂಡು ಬಂದು ನಗರಿಯು ರಾತ್ರಿಯ ಕತ್ತಲಲ್ಲಿ ಮಿನುಮಿನುಗುವ ಕಟ್ಟಡಗಳ ಬೆಳಕು ಹೊರಚೆಲ್ಲುತ್ತಿದ್ದುದು ನಂಬಲಾಗದಿದ್ದರೂ ನಿಜವಾಗಿತ್ತು. ಅವರ ಮೆನು ಕಾರ್ಡ್‌ನಲ್ಲಿನ ದೃಶ್ಯಗಳಲ್ಲಿನ ವ್ಯಕ್ತಿಗಳು ಆ ರೆಸ್ಟೋರೆಂಟ್‌ನಲ್ಲಿ ಲಭ್ಯವಿರುವ ತಿಂಡಿ, ತಿನಿಸು, ಪಾನೀಯಗಳ ವಿವರಗಳನ್ನು ನೀಡಿ ಬೆಲೆ ನಮೂದಿಸಲಾಗುತ್ತಿತ್ತು. ಅವಿರತ್ ಹಾಗೂ ಹನ್ನಾ ತಮ್ಮ ಇಚ್ಛೆಯ ಪಾನೀಯ ಹಾಗೂ ತಿನಿಸಿಗಾಗಿ ಮೆನು ಕಾರ್ಡ್‌ನಲ್ಲೇ ಬೆರಳು ಒತ್ತುವುದರ ಮೂಲಕ ಆರ್ಡರ್ ಸಲ್ಲಿಸಿದ ಒಂದೆರಡು ನಿಮಿಷದೊಳಗೆ ರೊಬೋ ಬೇರರ್‌ಗಳು ತಿನಿಸುಗಳನ್ನು ಅವರ ಮೇಜಿಗೆ ಸರಬರಾಜು ಮಾಡಿದ್ದರು. ಫ್ಲೇವರ್ ಉಳ್ಳ ತಂಪು ಪಾನೀಯವನ್ನು ನಿಧಾನವಾಗಿ ಮೆಲ್ಲುತ್ತಾ ಅವಿರತ್ ಮೊದಲು ಮಾತು ಶುರುಮಾಡಿದ್ದ.

‘ನೀವು ಟ್ರಾಫಿಕ್ ವಾರ್ಡನ್ ಆಗಿ ಯಾವಾಗಿನಿಂದ ಈ ಸೇವೆಗೆ ಸೇರಿಕೊಂಡಿರಿ ಮ್ಯಾಮ್?’

‘ನನ್ನನ್ನು ಹನ್ನಾ ಎಂದು ಸಂಬೋಧಿಸಿದರೆ ಸಾಕು’ ಎಂದು ಕೊಂಚ ಸಲಿಗೆ ನೀಡಿ ಮಾತು ಮುಂದುವರಿಸಿದಳು.

‘ಒಂದು ವರ್ಷದ ಹಿಂದೆಯಷ್ಟೇ ಸರ್ಕಾರವು ಸಂಚಾರಿ ಕಾರ್ಯಕಾರಿ ಹುದ್ದೆಗಳನ್ನು ಹಣದ ಅಭಾವದಿಂದಾಗಿ ಹೊರಗುತ್ತಿಗೆ ನೀಡಿದಂತಹ ಸಂದರ್ಭದಲ್ಲಿ ನಾನು ನನ್ನ ಬಿಡುವಿನ ವೇಳೆಯಲ್ಲಿ ಕೊಂಚವಾದರೂ ಜನಸೇವೆಗೆ